


ಎಡದಿಂದ ಬಲಕ್ಕೆ :

1. ಭ್ರಮೆಯನ್ನು ಹೋಗಲಾಡಿಸುವಂತಾದದ್ದಕ್ಕೆ ಸಂತಸ ಆಚರಿಸು (4)
3. ವೈಪರೀತ್ಯವೇನೇ ಇರಲಿ , ಆತನಂತೂ ಬಹಳ ನಮ್ರ ನಡತೆಯವ (3)
4. ತಳವೇ ಪತ್ತೆಯಾಗಿಲ್ಲ ಅಷ್ಟು ಭಾರೀ ಆಳದ ಸ್ಥಳ (3)
6. ಅಪ್ಪ ಅಮ್ಮನ ಪ್ರೀತಿ ಹೋಲಿಕೆಯೇ ಇಲ್ಲದ್ದು , ಅಲ್ಲವೇ ? (4)
8. ಅಂದವಾದ ರಂಗು ರಂಗಿನ ಸುಗಂಧ ದ್ರವ್ಯ (4)
10. ಪ್ರಳಯದಂತಾದರೂ ಭದ್ರ ನಿಲ್ಲಬಲ್ಲ ಬುನಾದಿ ಅದು (4)
12. ವೈರಾಗ್ಯವನ್ನು ತೊರೆದೊಡನೆ ಕಂಡದ್ದು ಹೊಸ ಹೊಸ ಬಣ್ಣ (4)
16. ಕರೆದವರನ್ನೆಲ್ಲ ಕೂರಿಸಲು ಈ ಸ್ಥಳ ತುಂಬ ಚಿಕ್ಕದು (3)
17. ವಿಚಾರ ಮಂಥನ ಮಾಡುವಲ್ಲಿ ಆತ ಭಾರೀ ಬುದ್ಧಿವಂತ (3)
18. ಗಣಿಯ ಕೆಲಸಗಾರ ಆತನ ಆಪ್ತ ಮಿತ್ರ (4)

ಮೇಲಿಂದ ಕೆಳಕ್ಕೆ :

1. ಸಂಪತ್ತಿಗಾಗಿ ದುಡಿದು ದುಡಿದು ಬೇಸತ್ತು ಹೋಗಿದ್ದಾನೆ (3)
2. ಸಪ್ತಗಿರಿ ಹತ್ತಿ ಬಂದವರಿಗೆಲ್ಲ ಜಗಿಯಲು ಅಡಿಕೆಯೇ ! (3)
3. ವ್ಯಾಪಾರಕ್ಕೆ ಇಟ್ಟಿರುವ ಕಲಾಕೃತಿ ಅಂದಗೆಟ್ಟಿದೆ (3)
5. ಆಕೆಗೆ ಒಗ್ಗುವಂತಿಲ್ಲದ ಖಾರ ಸಾಂಬಾರ ವಸ್ತು (3)
6. ಆತನಿಗೆ ಆಶ್ಚರ್ಯವಾಗುವುದು ಖಚಿತವಿಲ್ಲ (4)
7. ಹಾನಿಯಾಗುವುದನ್ನು ಮುಂದೆ ನಿಂತು ತಪ್ಪಿಸಿದ ಶ್ರೇಷ್ಠ ವ್ಯಕ್ತಿ (4)
8. ದಾನ ಪಡೆದೊಡನೆ ನಿಂತಲ್ಲಿಯೇ ಆತ ಅದೃಶ್ಯನಾದ (4)
9. ಬರುವಾಗಲೇ ದರ್ಪದ ಅಂಗನೆಯ ಸೊಕ್ಕು ಮುರಿಯಿತು (4)
11. ತುಪಾಕಿ ಬಳಸಿ ಕೊಲೆ ಮಾಡಿದ ಮಹಾ ಪಾಪಿ (3)
13. ಅವರ ಮಾತಿನಂತೆಯೇ ನಡೆಯಬೇಕೆಂಬ ಒತ್ತಾಯ (3)
14. ಅಂದಗಾತಿಗೆ ಒಪ್ಪುವಂತಹ ಸುಂದರ ಗೆಜ್ಜೆ (3)
15. ಆಧಾರ ತಪ್ಪಿದೊಡನೆ ಧೈರ್ಯ ಕಳೆದುಕೊಂಡನೇ ? (3)

## 01.09.16 ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅಸಂಗತ 3. ನಿಕೃಷ್ಟ 4. ಟಾಕೀಸು 6. ಕಕಮಕ 7. ಕಂಪನ 9. ವರ್ಣನೆ 11. ರಕ್ಷಕ 13. ಟಗರು 15. ಹಾಸ್ಯಗಾರ 17. ತೆರವು 18. ಹಮ್ಮೀರ 19. ಗೆರೆ ಹಾಕು

ಮೇಲಿಂದ ಕೆಳಕ್ಕೆ:

1. ಅಷ್ಟಕ 2. ತಟಾಕ 3. ನಿಕ್ಷೇಪ 5. ಸುವರ್ಣ 7. ಕಂದಾಚಾರ 8. ನಕ್ಷತ್ರಿಕ 9. ವರ್ಣಪಟ 10. ನೆರೆಯೂರು 12. ಕ್ಷಮತೆ 14. ಗಮಾರ ; 15. ಹಾವುಗೆ ; 16. ರಹಕು ( = ಕುಹರ ತಲೆಕೆಳಗು )

# ಪ್ರಶ್ನಾಂಕಣ

## ಹೋಟ್ಜಿನ್ ಏನು ವಿಶೇಷ ?

ಹೋಟ್ಜಿನ್ ಅದೊಂದು ಹಕ್ಕಿ. ದಕ್ಷಿಣ ಅಮೆರಿಕದ 'ಗಯಾನಾ' ದೇಶದ ರಾಷ್ಟ್ರ ಪಕ್ಷಿ ಆಗಿರುವುದು ಅದರ ಮೊದಲ ವಿಶೇಷ. ಕೋಳಿಗಿಂತ ಕೊಂಚ ಅಧಿಕ ಗಾತ್ರದ ಈ ಹಕ್ಕಿ ಅಮೆಜಾನ್ ನ ಜೌಗು ಅರಣ್ಯ ಮತ್ತು ಮ್ಯಾಂಗ್ರೂವ್ ಅಡವಿಗಳ ವೃಕ್ಷವಾಸಿ. ಚಿಕ್ಕ ತಲೆ, ಉದ್ದ ಕತ್ತು, ಪುಕ್ಕ ರಹಿತ ನೀಲಿ ಮುಖ, ಕೆಂಪು ಕಣ್ಣುಗಳು ಮತ್ತು ನೆತ್ತಿಯ ಮೇಲೊಂದು ಜುಟ್ಟು' ಇವು ಹೋಟ್ಜಿನ್ ನ ದೇಹ ಲಕ್ಷಣಗಳು (ಚಿತ್ರ ನೋಡಿ). ವೃಕ್ಷಗಳ ಕೊಂಬೆ ರೆಂಬೆಗಳಲ್ಲೇ ದಿನದ ಬಹುಕಾಲ ಕಳೆವ ಈ ಹಕ್ಕಿಯದು ತುಂಬ ಶ್ರಮದ, ಮಂದ ವೇಗದ, ಅಷ್ಟಾ ವಕ್ರವಾದ ಹಾರಾಟ. ಪ್ರೌಢ ಹಂತ ತಲುಪುವವರೆಗೂ ಈ ಹಕ್ಕಿ ಮರಿಗಳ ರೆಕ್ಕೆಗಳ ಮುಂತುದಿಗಳಲ್ಲಿ ಕೊಕ್ಕೆ ರೂಪದ ರಚನೆಗಳು ಹೋಟ್ಜಿನ್ ನ ಮತ್ತೊಂದು ವಿಶೇಷ.

ಹೋಟ್ಜಿನ್ ನ ಪರಮ ವಿಶೇಷ ಅದರ ಅಸಹನೀಯ ದುರ್ಗಂಧ ; ಹತ್ತಿರ ಹೋದರೇ ವಾಕರಿಕೆ ಬರಿಸುವ ಗಾಢ ದುರ್ನಾತದ ಶರೀರ. ಇದಕ್ಕೆ ಅದರ ಆಹಾರ ಕ್ರಮ ಮತ್ತು ವಿಶಿಷ್ಟ ಜೀರ್ಣ ಕ್ರಿಯಾ ವ್ಯವಸ್ಥೆಯೇ ಕಾರಣ.

ಎಲ್ಲ ಹಕ್ಕಿಗಳಿಂದ ಸಂಪೂರ್ಣ ಭಿನ್ನವಾಗಿ ಹೋಟ್ಜಿನ್ ಶುದ್ಧ 'ಪರ್ಣಾಹಾರಿ'. ಸುಮಾರು ಐವತ್ತು ಪ್ರಭೇದಗಳ ವೃಕ್ಷಗಳ ಎಲೆಗಳೇ ಅದರ ಆಹಾರ. ಈ ಹಕ್ಕಿ ಅಗಿದು ನುಂಗುವ ಎಲೆಗಳು ನೇರವಾಗಿ ಅದರ ಜಠರವನ್ನು ಸೇರುವುದಿಲ್ಲ. ಸ್ತನಿ ವರ್ಗದ ಮೆಲುಕು ಹಾಕುವ ಪ್ರಾಣಿಗಳಾದ ಹಸು, ಎಮ್ಮೆ, ಇತ್ಯಾದಿಗಳಲ್ಲಿ ಆಗುವಂತೆ ಮೊದಲು ಆ ಅಗಿದ ಎಲೆ ಚೂರುಗಳು ಹೋಟ್ಜಿನ್ ನ ಜೀರ್ಣಾಂಗ ವ್ಯೂಹದ ಒಂದು ವಿಶಿಷ್ಟ ಕೊಠಡಿಯನ್ನು ಸೇರುತ್ತವೆ. ಅಲ್ಲಿ ಸಂಗ್ರಹವಾದ ವಿಶೇಷ ಜೀರ್ಣಕಾರೀ ಬ್ಯಾಕ್ಟೀರಿಯಾಗಳು ಎಲೆ ಚೂರುಗಳನ್ನು ಕೊಳೆಯುವಂತೆ ಮಾಡುತ್ತವೆ. ನಂತರ ಆ ಆಹಾರ ಜಠರಕ್ಕೆ ಹೋಗಿ ಅಲ್ಲಿ ಜೀರ್ಣವಾಗುತ್ತದೆ. ಬ್ಯಾಕ್ಟೀರಿಯಾಗಳಿಂದ ಕೊಳೆಯಲ್ಪಡುವಾಗ ಬಿಡುಗಡೆಯಾಗುವ ಹಲವಾರು ವಾಸನಾ ರಾಸಾಯನಿಕ ಸಂಯುಕ್ತಗಳ ಮಿಶ್ರಣದಿಂದಾಗಿ




ಹೋಟ್ಜಿನ್ ನದು ಗಬ್ಬು ವಾಸನೆ ; ಅದರ ಶರೀರದಿಂದ ನಿರಂತರ ಹೊಮ್ಮುವ 'ಕೊಳೆತ ಹಸಿ ಸಗಣಿ ಗೊಬ್ಬರದ ಅಸಹ್ಯ ವಾಸನೆ'. ಹಾಗಾಗಿಯೇ ಹೋಟ್ಜಿನ್ ಗೆ 'ಗಬ್ಬು ಹಕ್ಕಿ' ಎಂಬ ಪರ್ಯಾಯ ನಾಮ ಕೂಡ.

ಅದೇನೇ ಇದ್ದರೂ, ಅತ್ಯಂತ ಸುಲಭವಾಗಿ ಮತ್ತು ಧಾರಾಳವಾಗಿ ಲಭ್ಯವಾಗುವ ಎಲೆಗಳಿಂದಾಗಿ ಇತರ ಹಕ್ಕಿಗಳಂತೆ ಹೋಟ್ಜಿನ್ ಹಗಲಿಡೀ ಶ್ರಮವಹಿಸಿ ಆಹಾರವನ್ನು ಅನ್ವೇಷಿಸುವ ಅಗತ್ಯವೇ ಇಲ್ಲ. ಪ್ರತಿ ದಿನ ಸ್ವಲ್ಪ ಸಮಯ ಒಂದಷ್ಟು ಎಲೆಗಳನ್ನು ಅಗಿದು ನುಂಗಿ ಉಳಿದೆಲ್ಲ ವೇಳೆ ವಿಶ್ರಾಂತವಾಗಿ ವೃಕ್ಷಗಳಲ್ಲಿ ಗುಂಪು ಗುಂಪಾಗಿ ಕುಳಿತು ಕಾಲಾಯಾಪನ ಮಾಡುವುದೇ ಅವುಗಳ ಜೀವನ ಕ್ರಮ.

ಹೀಗೆ ಜೀವನವಿಡೀ ಆರಾಮದಾಯಕ ಬದುಕನ್ನು ಪಡೆದಿರುವುದೂ ಹೋಟ್ಜಿನ್ ನ ಮತ್ತೊಂದು ವಿಶೇಷ.

■ ಎನ್. ವಾಸುದೇವ್